# ಅನಂತ್ ದರ್ಶನಕ್ಕೆ ಹರಿದು ಬಂದ ದೆಹಲಿ ದಂಡು

## ಹಸನ್ಮುಖಿಗೆ ಅಶ್ರುತರ್ಪಣ ಸಲ್ಲಿಸಲು ಕೇಂದ್ರ ಸರ್ಕಾರವೇ ಬೆಂಗಳೂರಿಗೆ ಶಿಫ್ಟ್

**ಬೆಂಗಳೂರು:** ದೆಹಲಿ ರಾಜಕೀಯ ಪಡಸಾಲೆ ಮೇಲೆ ಗಾಢವಾದ ಪ್ರಭಾವ ಬೀರುವ ಸಾಮರ್ಥ್ಯ ಹೊಂದಿದ್ದ ಅನಂತ್‌ಕುಮಾರ್ ಅಗಲಿಕೆಗೆ ಕೇಂದ್ರ ಸರ್ಕಾರದ ಸಚಿವ ಸಂಪುಟ, ರಾಷ್ಟ್ರೀಯ ಬಿಜೆಪಿ ದಂಡು ಕಂಬನಿ ಮಿಡಿದಿದೆ. ನಿನ್ನೆ ಬಹುತೇಕ ಕೇಂದ್ರ ಸಚಿವರು ಹಾಗೂ ಬಿಜೆಪಿ ರಾಷ್ಟ್ರೀಯ ನಾಯಕರು, ಸಂಘ ಪರಿವಾರದ ಪ್ರಮುಖರು ಬೆಂಗಳೂರಿಗೆ ಆಗಮಿಸಿ ಅನಂತ್ ಅಂತಿಮ ದರ್ಶನ ಪಡೆದರು.

ದೆಹಲಿ ರಾಜಕಾರಣದಲ್ಲಿ ಪಳಗಿದ್ದ ಅನಂತ್ ಎರಡು ದಶಕಗಳಿಗೂ ಹೆಚ್ಚು ಕಾಲ ರಾಷ್ಟ್ರ ರಾಜಧಾನಿಯಲ್ಲಿ ಬಿಜೆಪಿಯ ಶಕ್ತಿ ಕೇಂದ್ರದ ನಿಕಟ ಸಂಬಂಧ ಹೊಂದಿದ್ದರು. ವಾಜಪೇಯಿ ಅವರು ಪ್ರಧಾನಿ ಆದಾಗ ಸಚಿವರಾಗುವ ಮೂಲಕ ಅಸ್ತಿತ್ವ ಕಂಡುಕೊಂಡಿದ್ದ ಅವರು, ಅನಂತರ ಬಿಜೆಪಿ ಘಟಾನುಘಟಿ ನಾಯಕರ ಸಾಲಿನಲ್ಲಿ ಬೆಳಗಿದ್ದರು. ವಾಜಪೇಯಿ, ಅಡ್ವಾಣಿ ನಂತರದ ಸ್ಥಾನವನ್ನು ಅಲಂಕರಿಸಿ ದೆಹಲಿ ಗದ್ದುಗೆಯನ್ನು ಪ್ರಭಾವಿಸುವ ಮಟ್ಟಕ್ಕೆ ಬೆಳೆದಿದ್ದರು. ರಾಷ್ಟ್ರ ಬಿಜೆಪಿಯ ಎಲ್ಲಾ ನಾಯಕರು ಅನಂತ್ ಒಡನಾಟಕ್ಕೆ ಹಾತೊರೆಯುತ್ತಿದ್ದರು. ಹಿರಿಯ ನಾಯಕರಾದ ನಂತರವೂ ಅವರ ಸರಳತೆ, ಸ್ನೇಹಪರತೆ, ಆಡಳಿತ ಶೈಲಿಯಿಂದಲೇ ಪಕ್ಷದ ಹಿರಿ ಕಿರಿಯ ನಾಯಕರ ಪಾಲಿಗೆ ಅಚ್ಚುಮೆಚ್ಚಿನ 'ಅನಂತ್‌ಕುಮಾರ್ ಜೀ' ಆಗಿದ್ದರು. ಮಂಗಳವಾರ ದೆಹಲಿಯಿಂದ ಹರಿದುಬಂದ ನಾಯಕರ ದಂಡು ಅನಂತ್ ಅವರ ಮೇಲಿಟ್ಟಿದ್ದ ಅಭಿಮಾನವನ್ನು ಸಾರಿತು.

ಉಪರಾಷ್ಟ್ರಪತಿ, ಅನಂತ್‌ಕುಮಾರ್ ಬಹು ಕಾಲದ ಒಡನಾಡಿ ಎಂ. ವೆಂಕಯ್ಯನಾಯ್ಡು, ಬಿಜೆಪಿ ಭೀಷ್ಮ, ಅನಂತ್ ಪಾಲಿನ ರಾಜಕೀಯ ಗುರು ಎಲ್.ಕೆ. ಅಡ್ವಾಣಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ, ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್, ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್, ಐಟಿಬಿಟಿ ಮತ್ತು ಕಾನೂನು ಸಚಿವ ರವಿಶಂಕರ್ ಪ್ರಸಾದ್, ಸಚಿವರಾದ ಪ್ರಕಾಶ್ ಜಾವ್ಡೇಕರ್, ಪಿಯೂಷ್ ಗೋಯಲ್, ಧರ್ಮೇಂದ್ರ ಪ್ರಧಾನ್, ತಾವರ್ ಚಂದ್ ಗೆಹ್ಲೋಟ್, ಡಾ. ಹರ್ಷವರ್ಧನ್, ವಿಜಯ್ ಗೋಯಲ್, ರಮೇಶ್ ಜಿಗಜಿಣಗಿ, ಅಶ್ವಿನಿಕುಮಾರ್ ಚೌಬೆ, ಪಿ.ಪಿ. ಚೌಧರಿ, ಮನ್‌ಸುಖ್ ಮಾಂಡವಿಯಾ, ರಾಮ್‌ದಾಸ್ ಅಠಾವಳೆ, ಅರ್ಜುನ್ ರಾಮ್ ಮೇಗ್‌ವಾಲ್, ರಾಮ್‌ಕೃಪಾಲ್ ಯಾದವ್, ಗಜೇಂದ್ರ ಸಿಂಗ್, ಶೇಕಾವತ್, ಡಿ.ವಿ. ಸದಾನಂದಗೌಡ ಸೇರಿದಂತೆ ಹಲವರು ಆಗಮಿಸಿ ಅಂತಿಮ ದರ್ಶನ ಪಡೆದು ಕಂಬನಿ ಮಿಡಿದರು.

ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಹಾಗೂ ಎಲ್.ಕೆ. ಅಡ್ವಾಣಿ ಅವರು ಅನಂತ್‌ಕುಮಾರ್ ಪತ್ನಿ ತೇಜಸ್ವಿನಿ ಹಾಗೂ ಪುತ್ರಿಯರಾದ ಐಶ್ವರ್ಯ, ವಿಜೇತಾ ಅವರಿಗೆ ಸಾಂತ್ವನ ಹೇಳಿದರು. ಅಡ್ವಾಣಿ ಅವರು ಕ್ಷಣ ಕಾಲ ಭಾವುಕರಾಗಿ, ಒತ್ತರಿಸಿಕೊಂಡು ಬರುವ ದುಃಖವನ್ನು ತಡೆದುಕೊಂಡು ತೇಜಸ್ವಿನಿ ಅವರ ತಲೆ ನೇವರಿಸಿ ಸಮಾಧಾನ ಹೇಳಿದರು.



ಸೋಮವಾರ ನಿಧನರಾದ ಕೇಂದ್ರ ಸಚಿವ ಅನಂತ್‌ಕುಮಾರ್ ಅವರ ಅಂತ್ಯಕ್ರಿಯೆಯಲ್ಲಿ ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ, ಕೇಂದ್ರ ಸಚಿವರಾದ ರಾಜನಾಥ್‌ಸಿಂಗ್, ಡಿ.ವಿ. ಸದಾನಂದಗೌಡ, ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಗಣ್ಯರು ಪಾಲ್ಗೊಂಡಿದ್ದರು.















ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ, ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಡಿ.ವಿ. ಸದಾನಂದಗೌಡ, ನಿರ್ಮಲಾ ಸೀತಾರಾಮನ್, ಪಿಯೂಷ್ ಗೋಯಲ್, ಧರ್ಮೇಂದ್ರ ಪ್ರಧಾನ್, ರವಿಶಂಕರ್ ಪ್ರಸಾದ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್. ಯಡಿಯೂರಪ್ಪ, ರಾಜ್ಯದ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಮತ್ತಿತರರು ಅಂತಿಮ ದರ್ಶನ ಪಡೆದರು. ಅನಂತ್ ಪತ್ನಿ ತೇಜಸ್ವಿನಿ ಅವರು ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಕಾಲಿಗೆರಗಿ ಆಶೀರ್ವಾದ ಪಡೆದಿದ್ದು ಗಮನ ಸೆಳೆಯಿತು. ಅಂತಿಮ ನಮನದ ಚಿತ್ರಪಟ.

## ಜೂನ್‌ನಲ್ಲಿ ಕಾಣಿಸಿಕೊಂಡ ಕ್ಯಾನ್ಸರ್ ಮಾರಿ ಅನಂತ್ ಬಲಿ ಪಡೆಯಿತು

# ರಹಸ್ಯವಾಗಿದ್ದ ಘಟನಾವಳಿಗಳ ಬಿಚ್ಚಿಟ್ಟ ವೈದ್ಯ!

**ಬೆಂಗಳೂರು:** ಶ್ವಾಸಕೋಶ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಕೇಂದ್ರ ಸಚಿವ ಅನಂತ್‌ಕುಮಾರ್ ಅವರು ರೋಗ ಪತ್ತೆಯಾದ ದಿನದಿಂದ ಅಂತ್ಯದ ದಿನದವರೆಗೂ ಹೇಗಿದ್ದರು ಎಂಬ ವಿವರವನ್ನು ವೈದ್ಯರು ಬಿಚ್ಚಿಟ್ಟಿದ್ದಾರೆ. ವಿದೇಶಕ್ಕೆ ಚಿಕಿತ್ಸೆಗೆ ತೆರಳುವವರೆಗೂ ತೀರಾ ಗುಟ್ಟಾಗಿದ್ದ ಅನಂತ್ ಕಾಯಿಲೆ ವಿಚಾರದ ಕುರಿತು ವೈದ್ಯರು ಮಾಹಿತಿ ನೀಡಿದ್ದಾರೆ.

ಜೂನ್ ತಿಂಗಳಲ್ಲಿ ಮೊದಲಿಗೆ ಅನಂತ್‌ಕುಮಾರ್ ಅವರಿಗೆ ಕ್ಯಾನ್ಸರ್ ಇರುವುದು ಪತ್ತೆಯಾಯಿತು, ಕೂಡಲೇ ಬಸವನಗುಡಿಯಲ್ಲಿರುವ ಶಂಕರ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಲಾಯಿತು. ಶಂಕರ ಕ್ಯಾನ್ಸರ್ ಆಸ್ಪತ್ರೆಗೆ ಅನಂತ್ ಪತ್ನಿ ತೇಜಸ್ವಿನಿ ಕೂಡ ಟ್ರಸ್ಟಿಯಾಗಿದ್ದಾರೆ.

ಆದರೆ ಅಲ್ಲಿನ ಚಿಕಿತ್ಸೆಯಿಂದ ಅನಂತ್‌ಕುಮಾರ್ ಅವರ ಆರೋಗ್ಯದಲ್ಲಿ ಯಾವುದೇ ಸುಧಾರಣೆ ಕಾಣಲಿಲ್ಲ, ಹೀಗಾಗಿ ನ್ಯೂಯಾರ್ಕ್‌ನ ಮೆಮೋರಿಯಲ್ ಸ್ಲೋನ್ ಕೆಟ್ಟರಿಂಗ್ ಕ್ಯಾನ್ಸರ್ ಸೆಂಟರ್‌ಗೆ ಸೆಪ್ಟಂಬರ್ ತಿಂಗಳಲ್ಲಿ ದಾಖಲಿಸಲಾಯಿತು.

ಅ. 20ರವರೆಗೆ ಅನಂತ್ ಸುಮಾರು 20 ದಿನಗಳ ಕಾಲ ಅಲ್ಲಿಯೇ ಇದ್ದರು. ಅವರಿಗೆ ನೀಡಿದ ಚಿಕಿತ್ಸೆಯಿಂದ ಯಾವುದೇ ಪ್ರಯೋಜನವಾಗಲಿಲ್ಲ, ಹೀಗಾಗಿ ಅವರು ವಾಪಸ್ ಭಾರತಕ್ಕೆ ಬರಲು ನಿರ್ಧರಿಸಿದರು, ಶಂಕರ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನಾವು ಚಿಕಿತ್ಸೆ ಮುಂದುವರಿಸಿದೆವು, ಆದರೆ ಅವರ ಆರೋಗ್ಯದಲ್ಲಿ ಯಾವುದೇ ಸುಧಾರಣೆಯಾಗಲಿಲ್ಲ, ಕಾಯಿಲೆ ಮತ್ತಷ್ಟು ಉಲ್ಬಣಗೊಂಡಿತು. ಇತ್ತೀಚೆಗೆ ಅಮೆರಿಕ ಬಿಡುಗಡೆ ಮಾಡಿದ ಹೊಸ ಔಷಧಿ ಕೂಡ ಅವರಿಗೆ ನೀಡಲಾಗಿತ್ತು, ಆದರೆ ಪ್ರಯೋಜನವಾಗಲಿಲ್ಲ ಎಂದು ಶಂಕರ ಕ್ಯಾನ್ಸರ್ ಫೌಂಡೇಷನ್ ವೈದ್ಯ ಡಾ. ಬಿ.ಎಸ್. ಶ್ರೀನಾಥ್ ಹೇಳಿದ್ದಾರೆ.

40 ವರ್ಷದ ನಂತರ ವರ್ಷಕ್ಕೆ ಒಮ್ಮೆಯಾದರೂ ಇಡೀ ದೇಹವನ್ನು ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂಬುದನ್ನು ಹಲವರು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ನಾವು ಪರೀಕ್ಷೆ ಮಾಡಿದಾಗ ಮಾತ್ರವಷ್ಟೆ ಕ್ಯಾನ್ಸರ್ ಪತ್ತೆಹಚ್ಚಲು ಸಾಧ್ಯ, ಆರಂಭಿಕ ಹಂತದಲ್ಲಿ ಅದರ ಯಾವುದೇ ಗುಣ ಲಕ್ಷಣಗಳು ಗೋಚರಿಸುವುದಿಲ್ಲ.

ರಾಜ್ಯ ವಿಧಾನಸಭೆ ಚುನಾವಣೆ ಸಮಯದಲ್ಲಿಯೇ ಅನಂತ್‌ಕುಮಾರ್ ಆವರಿಗೆ ಕಾಯಿಲೆ ಕಾಣಿಸಿಕೊಂಡಿದೆ, ಆ ವೇಳೆಯಲ್ಲಿ ಅವರಿಗೆ ವಿಪರೀತ ಕೆಮ್ಮು ಕಾಣಿಸಿಕೊಂಡಿತ್ತು. ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚಿನ ಧೂಳಿನ ಪ್ರದೇಶದಲ್ಲಿ ಪ್ರಚಾರ ಕೈಗೊಂಡಿದ್ದರಿಂದ ಕೆಮ್ಮು ಹೆಚ್ಚಾಗಿದೆ ಎಂದು ಅವರು ಭಾವಿಸಿದ್ದರು, ಸೋಮವಾರ ಬೆಳಿಗ್ಗೆ 1.45ಕ್ಕೆ ಅವರು ಕೊನೆಯುಸಿರೆಳೆದರು ಎಂದು ಶ್ರೀನಾಥ್ ವಿವರಿಸಿದ್ದಾರೆ.

## ತುಂಬು ಗರ್ಭಿಣಿ ಐಶ್ವರ್ಯ–ಮಗಳ ಹೊಟ್ಟೆಯಲ್ಲಿ ಮತ್ತೆ ಹುಟ್ಟುತ್ತಾರಾ ಅಪ್ಪ ಅನಂತ್?




**ಬೆಂಗಳೂರು:** ದೆಹಲಿಯಲ್ಲಿ ರಾಜ್ಯದ ಅಸ್ಮಿತೆ ಕಾಯ್ದುಕೊಂಡಿದ್ದ ಕೇಂದ್ರ ಸಚಿವ ಅನಂತ್ ಕುಮಾರ್ ಇನ್ನು ನೆನಪು ಮಾತ್ರ. ಅವರ ಮರು ಹುಟ್ಟು ಇದೀಗ ಚರ್ಚೆ ವಿಷಯವಾಗಿದೆ. ತುಂಬು ಗರ್ಭಿಣಿ ಮಗಳ ಹೊಟ್ಟೆಯಲ್ಲಿ ಅಪ್ಪ ಅನಂತ್ ಹುಟ್ಟು ಬರಲಿ ಎಂದು ಅಭಿಮಾನಿಗಳು, ಕುಟುಂಬಸ್ಥರು ಹಂಬಲಿಸಿದ್ದಾರೆ.

ಅಪ್ರತಿಮ ನಾಯಕ ಅನಂತ್‌ಕುಮಾರ್ ಅಗಲಿಕೆಗೆ ಗಣ್ಯರು ಕಂಬನಿ ಮಿಡಿದಿದ್ದಾರೆ. ಅವರ ಕುಟುಂಬವಂತೂ ಶೋಕಸಾಗರದಲ್ಲಿ ಮುಳುಗಿದೆ. ಅದರಲ್ಲೂ ಇಬ್ಬರು ಪುತ್ರಿಯರಿಗೆ ಅಪ್ಪ ಇಲ್ಲ ಅನ್ನೋದು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸೋಮವಾರದಿಂದ ಎರಡನೇ ಪುತ್ರಿ ವಿಜೇತಾ, ಅಪ್ಪನ ಮೃತದೇಹದ ಬಳಿಯೇ ಇದ್ದು ಕಣ್ಣೀರಿಡುತ್ತಿದ್ದರು. ಅವರ ಹಿರಿಯ ಮಗಳು ಐಶ್ವರ್ಯ ಅಪ್ಪನ ಅಂತಿಮ ದರ್ಶನಕ್ಕಾಗಿ ರಾಜಸ್ತಾನದಿಂದ ಆಗಮಿಸಿದ್ದಾರೆ.

ರಾಜಸ್ತಾನ ಮೂಲದ ದಿವೇಶ್ ಎನ್ನುವವರ ಕೈ ಹಿಡಿದಿರುವ ಐಶ್ವರ್ಯ, ಮಂಗಳವಾರ ಬೆಳಿಗ್ಗೆ ಬೆಂಗಳೂರಿಗೆ ಆಗಮಿಸಿದರು. ಅಪ್ಪನನ್ನು ಕಳೆದುಕೊಂಡಿರುವ ಐಶ್ವರ್ಯ ಕಳೆದ ಎರಡು ವರ್ಷಗಳ ಹಿಂದೆ ಮದುವೆಯಾಗಿದ್ದರು. ಇದೀಗ ಅವರು 7 ತಿಂಗಳ ತುಂಬು ಗರ್ಭಿಣಿ ಎನ್ನಲಾಗಿದ್ದು, ಮಗುವಿಗೆ ಜನ್ಮ ನೀಡುವ ಸಂತೋಷದಲ್ಲಿದ್ದ ಮಗಳು ಐಶ್ವರ್ಯಾ ಅವರಿಗೆ, ಅಪ್ಪನ ನಿಧನ ದೊಡ್ಡ ಆಘಾತ ನೀಡಿದೆ. ನೋವಿನಲ್ಲೇ ರಾಜಸ್ತಾನದಿಂದ ಆಗಮಿಸಿದ ಐಶ್ವರ್ಯ, ತಮ್ಮ ತಂದೆಯ ಅಂತಿಮ ದರ್ಶನ ಪಡೆದರು. ಗರ್ಭಿಣಿ ಮಗಳ ಹೊಟ್ಟೆಯಲ್ಲಿ ತಂದೆ ಹುಟ್ಟಲಿ ಎನ್ನುವ ನಿರೀಕ್ಷೆ ಕುಟುಂಬ, ಅಭಿಮಾನಿಗಳದ್ದು ಎನ್ನಲಾಗಿದೆ.

## ಅನಂತ್‌ಕುಮಾರ್ ನಿರ್ವಹಿಸುತ್ತಿದ್ದ ರಸಗೊಬ್ಬರ ಖಾತೆ ಡಿವಿಎಸ್ ಮಡಿಲಿಗೆ

**ಬೆಂಗಳೂರು:** ಕಳೆದ ಕೆಲ ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಬಿಜೆಪಿಯ ಹಿರಿಯ ನಾಯಕ ಹಾಗೂ ಕೇಂದ್ರ ಸಚಿವ ಅನಂತ್‌ಕುಮಾರ್(59) ಅಕಾಲಿಕ ನಿಧನರಾದ ಹಿನ್ನೆಲೆಯಲ್ಲಿ ಅವರು ಹೊಂದಿದ್ದ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ಹೊಣೆಯನ್ನು ರಾಜ್ಯದ ಕೇಂದ್ರ ಸಚಿವರಾದ ಸದಾನಂದಗೌಡರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ಕೇಂದ್ರ ಕಾನೂನು ಸಚಿವ ಸದಾನಂದಗೌಡ ಅವರಿಗೆ ರಸಗೊಬ್ಬರ ಖಾತೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಇನ್ನು ಅನಂತಕುಮಾರ್ ನಿರ್ವಹಣೆ ಮಾಡುತ್ತಿದ್ದ ಸಂಸದೀಯ ವ್ಯವಹಾರಗಳ ಖಾತೆಯನ್ನು ನರೇಂದ್ರ ಸಿಂಗ್ ತೋಮರ್ ಅವರಿಗೆ ವಹಿಸಿಕೊಡಲಾಗಿದೆ.

ಕೇಂದ್ರ ಮಂತ್ರಿಯಾಗಿದ್ದ ಅನಂತ್‌ಕುಮಾರ್ ರಸಗೊಬ್ಬರ ಖಾತೆ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದರು. ವೆಂಕಯ್ಯನಾಯ್ಡು ಉಪರಾಷ್ಟ್ರಪತಿಯಾಗಿ ಆಯ್ಕೆ ಆದ ಬಳಿಕ ತೆರವಾದ ಸಂಸದೀಯ ವ್ಯವಹಾರಗಳ ಖಾತೆಯನ್ನು ಅನಂತಕುಮಾರ್ ಅವರಿಗೆ ಹೆಚ್ಚುವರಿಯಾಗಿ ವಹಿಸಲಾಗಿತ್ತು. ಅದೀಗ, ನರೇಂದ್ರ ಸಿಂಗ್ ತೋಮರ್ ಹೆಗಲಿಗೆ ಬಿದ್ದಿದೆ.

## ಅನಂತಕುಮಾರ್ ನಿಧನಕ್ಕೆ ಫಿಲಂ ಛೇಂಬರ್‌ನಲ್ಲಿ ಶ್ರದ್ಧಾಂಜಲಿ

**ಬೆಂಗಳೂರು:** ಅನಾರೋಗ್ಯದಿಂದಾಗಿ ಅಕಾಲಿಕ ಮರಣಕ್ಕೆ ತುತ್ತಾದ ಕೇಂದ್ರ ಸಚಿವ ಅನಂತಕುಮಾರ್ ಅವರಿಗೆ ಫಿಲಂ ಛೇಂಬರ್‌ನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಫಿಲಂ ಛೇಂಬರ್‌ನ ಕಚೇರಿಯಲ್ಲಿ ಧೀಮಂತ ನಾಯಕ ಅನಂತಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸಲಾಯಿತು. ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ಫಿಲಂ ಛೇಂಬರ್‌ನ ಅಧ್ಯಕ್ಷ ಚಿನ್ನೇಗೌಡ, ಅನಂತಕುಮಾರ್ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಡುವೆ ಕೊಂಡಿಯ ಹಾಗೆ ಕೆಲಸ ಮಾಡುತ್ತಿದ್ದರು. ಕನ್ನಡ ಭಾಷೆಯ ಮೇಲೆ ಅಪಾರ ಪ್ರೀತಿ ಹೊಂದಿದ್ದ ಅವರು, ವಿಶ್ವಸಂಸ್ಥೆ ಹಾಗೂ ಲೋಕಸಭೆಯಲ್ಲಿ ಕನ್ನಡದಲ್ಲೇ ಮಾತನಾಡಿದ್ದರು. ಇದು ಅವರಿಂದ ಮಾತ್ರ ಸಾಧ್ಯ. ಅವರ ಅಕಾಲಿಕ ಮರಣ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ಈ ದುಃಖವನ್ನು ಭರಿಸುವ ಶಕ್ತಿ ಆ ಭಗವಂತ ಅವರ ಕುಟುಂಬಕ್ಕೆ ನೀಡಲಿ ಎಂದರು.


ಇನ್ನು ಈ ವೇಳೆ ಫಿಲಂ ಛೇಂಬರ್ ಕಾರ್ಯದರ್ಶಿ ಬಾ.ಮಾ. ಹರೀಶ್, ಮಾಜಿ ಅಧ್ಯಕ್ಷ ಸಾ.ರಾ. ಗೋವಿಂದು, ಚಂದ್ರಶೇಖರ್, ನಿರ್ಮಾಪಕ ಎನ್.ಎಂ. ಸುರೇಶ್ ಮತ್ತಿತರರಿದ್ದರು.

## ಕೋಟೆ ನಾಡು ಚಿತ್ರದುರ್ಗ ಸೇರಿದಂತೆ ವಿವಿಧೆಡೆ ಭೂಕಂಪ!

**ಬೆಂಗಳೂರು:** ಚಿತ್ರದುರ್ಗ ಸೇರಿದಂತೆ ವಿವಿಧೆಡೆ ಲಘು ಭೂಕಂಪನ ಸಂಭವಿಸಿದೆ. ಚಿತ್ರದುರ್ಗದ ಹೊಸದುರ್ಗ ತಾಲೂಕಿನ ಗುಡ್ಡದ ನೇರಳೆಕೆರೆ ಮತ್ತು ಕಂಚೀಪುರದಲ್ಲಿ ಭೂಕಂಪನವಾಗಿದ್ದು, ಸಾರ್ವಜನಿಕರು ಆತಂಕಕ್ಕೊಳಗಾಗಿದ್ದಾರೆ. ಲಘು ಭೂಕಂಪನವನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಕೇಂದ್ರದ ಹಿರಿಯ ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಗುಡ್ಡದ ನೇರಳೆಕೆರೆ ಗ್ರಾಮದ ಈಶಾನ್ಯ ಭಾಗದ 200 ಮೀಟರ್ ದೂರದಲ್ಲಿ ಬೆಳಿಗ್ಗೆ 10.23ರಲ್ಲಿ ಭೂಮಿ ನಡುಗಿದ ಅನುಭವವಾಗಿದೆ. ಇದರಿಂದ ಜನ ಆತಂಕಗೊಂಡು ಮನೆಯಿಂದ ಹೊರಗೋಡಿ ಬಂದಿದ್ದಾರೆ. ಭೂಕಂಪನ ತೀವ್ರತೆ ಅಳೆಯುವ ಸಿಸ್ಮೋಗ್ರಾಫ್ ಮಾಪನದಲ್ಲಿ ಕಂಪನದ ತೀವ್ರತೆ 1.6 ಮ್ಯಾಗ್ನಟ್ಯೂಡ್ ಎಂದು ನಮೂದಾಗಿದೆ. ಅದೇ ರೀತಿ ಹೊಸದುರ್ಗ ತಾಲೂಕಿನ ಕಂಚೀಪುರದಲ್ಲಿ ಭಾರೀ ಶಬ್ದದೊಂದಿಗೆ ಭೂಮಿ ಕಂಪಿಸಿದೆ ಎಂದು ಹೇಳಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಲಘು ಭೂಕಂಪವಾಗಿರುವುದು ಜನರನ್ನು ಬೆಚ್ಚಿ ಬೀಳಿಸಿದೆ. ಭೂಕಂಪನದಿಂದ ಯಾವುದೇ ಆಸ್ತಿಪಾಸ್ತಿ ಹಾನಿಯಾಗಿಲ್ಲ. ಆದರೆ ಕೆಲ ಕಾಲ ಭೂಮಿ ನಡುಗಿದಾಗ ಜನ ಭಯಭೀತರಾಗಿದ್ದಾರೆ.

## ಮಿ–ಟೂ ಆರೋಪ: ನಿರ್ದೇಶಕ ಶ್ರೀವತ್ಸ ಕ್ಷಮೆ ಕೋರಿದ ಸಂಜನಾ



**ಬೆಂಗಳೂರು:** ನಿರ್ದೇಶಕ ರವಿ ಶ್ರೀವತ್ಸವ್ ಮೇಲೆ ಮಿ–ಟೂ ಆರೋಪ ಮಾಡಿದ್ದ ನಟಿ ಸಂಜನಾ ಗರ್ಲಾನಿ ಕೊನೆಗೂ ಕ್ಷಮೆಯಾಚಿಸಿದ್ದಾರೆ. ಮಂಗಳವಾರ ಹಿರಿಯ ನಟ ಅಂಬರೀಶ್ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಸಂಜನಾ ಬಹಿರಂಗ ಕ್ಷಮೆ ಕೇಳಿದ್ದಾರೆ. ಅವರು ಕಳೆದ ಒಂದು ತಿಂಗಳ ಹಿಂದೆ ಗಂಡ ಹೆಂಡತಿ ಚಿತ್ರದ ನಿರ್ದೇಶಕ ರವಿ ಶ್ರೀವತ್ಸವ್ ಮೇಲೆ ಮಿ–ಟೂ ಆರೋಪ ಮಾಡಿದ್ದರು. ಆ ಚಿತ್ರದ ಚಿತ್ರೀಕರಣದ ವೇಳೆ ತನಗೆ ಅಸುರಕ್ಷತೆ ಕಾಡಿತ್ತು. ಕೇವಲ ಒಂದು ಕಿಸ್ ಅಂತಾ ಹೇಳಿ ಸಾಕಷ್ಟು ಕಿಸ್‌ಗಳನ್ನು ಮಾಡಿಸಿದ್ದರು ಎಂದು ಬಲವಾದ ಆರೋಪ ಮಾಡಿದ್ದರು. ಅವರ ಈ ಆರೋಪ ತಳ್ಳಿ ಹಾಕಿದ್ದ ರವಿ ಶ್ರೀವತ್ಸವ್, ನಿರ್ದೇಶಕರ ಸಂಘದ ಮೂಲಕ ಸಂಜನಾ ಕ್ಷಮೆ ಯಾಚಿಸಬೇಕೆಂದು ಒತ್ತಾಯಿಸಿದ್ದರು. ನ. 8ನೇ ತಾರೀಖಿನೊಳಗೆ ಕ್ಷಮೆ ಕೇಳಲು ಗಡುವು ಸಹ ನೀಡಿತ್ತು. ಇನ್ನು ಗಡವು ಉಲ್ಲಂಘಿಸಿದ್ದ ಸಂಜನಾ ಮತ್ತೆರಡು ದಿನ ಕಾಲಾವಕಾಶ ಹಾಗೂ ಅಂಬರೀಶ್ ಮಧ್ಯಸ್ಥಿಕೆಯಲ್ಲಿ ಕ್ಷಮೆ ಕೋರಿಸುತ್ತೇನೆಂದು ಹೇಳಿದ್ದರು. ಅದರಂತೆ ಮಂಗಳವಾರ ಕಲಾವಿದರ ಸಂಘ ಹಾಗೂ ನಿರ್ದೇಶಕರ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ ಸಂಜನಾ ಅವರು ಬಹಿರಂಗ ಕ್ಷಮೆ ಕೋರಿದ್ದಾರೆ.

Printed, Published and Owned by **M N Mahadeva Gowda** and Published at # 21, 5th Main, Jayamahal, Bengaluru - 560046. Phone : 080-42116969, and Printed at Lavanya Mudrana, # 79, 9th Cross, 5th Main, T R Mills Compound, Chamarajapet, Bengaluru - 560018. **Postal Regn.No KRNA/BGE-1071/2016-2018,** Posted at Bengaluru PSO, Mysuru Road, Bengaluru-560026, **RNI.No.KARKAN/2010/33168, Editor: M N MAHADEVA GOWDA**.